**ಒ.ಎಸ್.ನಂ. 122/2023**
**PW-1**

(ಇಂದು ದಿನಾಂಕಃ 08-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ BNK ವಕೀಲರಿಂದಃ**

ನನಗೆ ಓದಲು ಬರೆಯಲು ಬರವುದಿಲ್ಲ. ನಾನು ಶಾಲೆ ಕಲಿತಿರುವುದಿಲ್ಲ. ದಾವೆ ಆಸ್ತಿಗಳ ಸ.ನಂಬರ ಹೇಳಲು ಬರುವುದಿಲ್ಲ. ಆದರೆ ಒಂದು 12 ಎಕರೆ ಮತ್ತು 11 ಎಕರೆ ಜಮೀನು ಇರುತ್ತವೆ. ಅವುಗಳ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ನಾನು ವೆಂಕಪ್ಪ ಅಲಿಯಾಸ ಯಂಕಪ್ಪ ರವರ ಮಗಳು ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಚಿನ್ನರಾಮುಲು ನನ್ನ ಅಣ್ಣ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವೆಂಕಪ್ಪ ಅಲಿಯಾಸ ಯಂಕಪ್ಪರವರ ಮಗಳು ಎಂದು ತೋರಿಸಲು ಪಡಿತರ ಚೀಟಿ, ಮತದಾರರ ಚೀಟಿ, ಆಧಾರ ಕಾರ್ಡ, ಮತದಾರರ ಪಟ್ಟಿಯ ಯಾದಿ ಮತ್ತು ಶಾಲಾ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ವೆಂಕಪ್ಪ ಅಲಿಯಾಸ ಯಂಕಪ್ಪ ಮತ್ತು ಚಿನ್ನರಾಮುಲು ರವರಿಗೆ ರಕ್ತ ಸಂಬಂಧವಾಗಲೀ ದೂರಿನ ಸಂಬಂಧವಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವಂಶಾವಳಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಯಂಕಪ್ಪರವರು ತೀರಿಕೊಂಡಾಗ ನಾನು ಸಣ್ಣವಳಿದ್ದೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಯಂಕಪ್ಪನ ಹೆಂಡತಿ ಯಲ್ಲಮ್ಮ ತೀರಿಕೊಂಡು 6-7 ವರ್ಷಗಳಾಗಿರುತ್ತವೆ ಎಂದರೆ ಸರಿ, ಅವಳು ನನ್ನ ತಾಯಿಯಾಗಿರುತ್ತಾಳೆ. ನನ್ನ ತಾಯಿ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ತಾಂಡೂರಿನ ಮಲ್ಕಾಪೂರಿನಲ್ಲಿ ಇರುತ್ತೇನೆ ಎಂದರೆ ಸರಿ. ನಾನು ಅಲ್ಲಿ ನನ್ನ ಉಪ ಜೀವನ ನಡೆಸಲು ಇರುತ್ತೇನೆ. ದಾವಾ ಜಮೀನುಗಳನ್ನು ಪ್ರತಿವಾದಿಯು ಉಳುಮೆ ಮಾಡುತ್ತಾನೆ ಎಂದರೆ ಸರಿಯಲ್ಲ. ನಾನು ಉಳುಮೆ ಮಾಡುತ್ತೇನೆ. ಆ ಬಗ್ಗೆ ಯಾವುದೇ ದಾಖಲಾತಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ನಾನು ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದಕ್ಕೆ ದಾವಾ ಆಸ್ತಿಗಳನ್ನು ಮಾರಾಟ ಮಾಡುತ್ತಾರೆ ಎಂದು ಪ್ರಶ್ನಿಸುವ ಹಕ್ಕು ನನಗೆ ಇಲ್ಲ ಎಂದರೆ ಸರಿಯಲ್ಲ.

**ಒ.ಎಸ್.ನಂ. 122/2023**
**PW-1**

ವೆಂಕಪ್ಪ ಅಲಿಯಾಸ ಯಂಕಪ್ಪನ ಹೆಂಡತಿ ಯಲ್ಲಮ್ಮರವರಿಗೆ ಹಲವಾರು ಕಾಯಿಲೆ ಗಳಿದ್ದು ಅವರ ಚಿಕಿತ್ಸೆಗಾಗಿ ಸಾಕಷ್ಟು ಹಣವನ್ನು ಪ್ರತಿವಾದಿ ಖರ್ಚು ಮಾಡಿದ್ದು ಆದರೂ ಅವರು ತೀರಿಕೊಂಡಿರುತ್ತಾರೆ ಎಂದರೆ ಅವರಿಗೆ ಯಾವುದೇ ರೋಗ ಇರಲಿಲ್ಲ. ನಾನು ಚಿನ್ನರಾಮುಲು ಒಟ್ಟು ಕುಟುಂಬದ ಸದಸ್ಯರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ತೋರಿಸಲು ಯಾವುದೇ ದಾಖಲಾತಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ತೋರಿಸಿರುವ ವಂಶಾವಳಿ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಆ ರೀತಿ ತೋರಿಸಲು ಯಾವುದೇ ದಾಖಲಾತಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ವೆಂಕಪ್ಪ ಅಲಿಯಾಸ ಯಂಕಪ್ಪರವರಿಗೆ ಪ್ರತಿವಾದಿ ಒಬ್ಬನೇ ಮಗ ಇರುತ್ತಾನೆ ಎಂದರೆ ಸರಿಯಲ್ಲ. ನಾನು ಮಗಳು ಇರುತ್ತೇನೆ. ದಾವಾ ಆಸ್ತಿಗಳಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.